**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 184/2023**

ಪಿಡಬ್ಲ್ಯೂ: 07
ಸಿಡಬ್ಲ್ಯೂ: 11

| | | |
|---|---|---|
| ಹೆಸರು | : | ಹನುಮಂತಪ್ಪ ಫಕ್ಕೀರಪ್ಪ ಕಂಬಳಿ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಗುಮ್ಮನಹಳ್ಳಿ |

ದಿನಾಂಕ : 19.04.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ಆರೋಪಿನಿಗೂ ಮತ್ತು ಚಾಸಾ-12 ರವರಿಗೂ ಸಂಬಂಧ ಇತ್ತು. ನಂತರ ಕುಬೇರಪ್ಪ ಈತನು ಆರೋಪಿನಿಗೆ ಪ್ರಶ್ನೆ ಮಾಡಿದನು. ಆಗ ಆರೋಪಿತನು ನಿನ್ನನ್ನೂ ಜೀವಂತ ಬಿಡುವುದಿಲ್ಲಾ ಅಂತಾ ಹೇಳಿದನು. ನಂತರ ಕುಬೇರಪ್ಪ ಮಾನಸಿಕ ಮಾಡಿಕೊಂಡು ಹೆದರಿ ಹೊಂಡದಲ್ಲಿ ಬಿದ್ದು ಮರಣ ಹೊಂದಿರುತ್ತಾನೆ. ದಿಃ 23.04.2023 ರಂದು ಮಧ್ಯಾಹ್ನ 1.30 ಗಂಟೆಗೆ ಮರಣ ಹೊಂದಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲು : ಮಾನ್ಯ ಎಪಿಪಿ ಯವರಿಂದ :**

ಆರೋಪಿತನು ಚಾಸಾ-12 ರವರ ಮನೆಗೆ ಹೋಗುವುದು ಬರುವುದು

ಮಾಡುತ್ತಿದ್ದನು ಅಂದರೆ ಸರಿ. ಚಾಸಾ-12 ರವರ ಜೊತೆ ಆರೋಪಿತನು ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದನು ಅಂದರೆ ಸರಿ. ಕುಬೇರಪ್ಪ ಚಾಸಾ-12 ರವರ ಮನೆಗೆ ಏಕೆ ಹೋಗುತ್ತಿ ಅಂತಾ ಹೇಳಿದನು ಎಂದರೆ ಸರಿ. ಆರೋಪಿತನು ಆಗ ಬೊಸಡಿ ಮಗ ಅಂತಾ ಬೈದನು ಅಂದರೆ ಸರಿ. ಚಾಸಾ-09, 10 ಮತ್ತು ನಾನು ಈ ಬಗ್ಗೆ ಪಂಚಾಯತಿ ಮಾಡಿರುತ್ತೇವೆ ಅಂದರೆ ಸರಿ. ಆದರೂ ಸಹ ಆರೋಪಿತನು ಚಾಸಾ-12 ರವರ ಮನೆಗೆ ಹೋಗುವುದು ಬಿಡಲಿಲ್ಲಾ ಅಂದರೆ ಸರಿ. ದಿಃ 12.05.2023 ರಂದು ಮಧ್ಯಾಹ್ನ 1.30 ಗಂಟೆಗೆ ಸುಬಾಸ ಈತನು ಮನಸಿಗೆ ಹಚ್ಚಿಕೊಂಡು ಹೊಂಡದಲ್ಲಿ ಬಿದ್ದು ಮರಣ ಹೊಂದಿದನು ಎಂದರೆ ಸರಿ. ನಂತರ ಅಗ್ನಿ ಶಾಮಕ ದಳದವರು ಶವ ಹೊರಗೆ ತೆಗೆದರು ಎಂದರೆ ಸರಿ. ಆಗ ಸಮಯ 5.00 ಗಂಟೆ ಆಗಿತ್ತು ಎಂದರೆ ಸರಿ. ಈ ಬಗ್ಗೆ ಚಾಸಾ-01 ರವರು ದೂರನ್ನು ಕೊಟ್ಟಿದ್ದರು ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಚಾಸಾ-01, ಕುಬೇರಪ್ಪ, ನಾನು ಸಂಬಂಧಿಕರು ಎಂದರೆ ಸರಿ. ನಾನು ಊರಿನ ಪ್ರಮುಖ ಅಂದರೆ ಸರಿ. ನಾನು ಮತ್ತು ಚಾಸಾ-09 ಸೇಹ್ನಿತರು ಅಂದರೆ ಸರಿ. ಚಾಸಾ-09 ಮತ್ತು ಆರೋಪಿತನಿಗೂ ಮನೆ ಮಂಜೂರಾದ ಬಗ್ಗೆ ಜಗಳ ಇತ್ತು ಅಂದರೆ ಸರಿಯಲ್ಲಾ. ಚಾಸಾ-09 ರವರು ಆರೋಪಿನಿಗೆ 1 ಲಕ್ಷ ಹಣ ಕೊಡಬೇಕು ಅಂತಾ ಜಗಳ ಇತ್ತು ಎಂದರೆ ನನಗೆ ಗೊತ್ತಿಲ್ಲಾ. ಈ ಬಗ್ಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಚಾಸಾ-12 ರವರ ಮನೆಗೆ ಆರೋತನು ಹೋಗುತ್ತಿದ್ದನು, ಆಗ ಕುಬೇರಪ್ಪ ಬೈದನು ನಂತರ ಆರೋಪಿತನು ಬೊಸಡಿ ಮಗ ಅಂತಾ ಬೈದನು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಕುಬೇರಪ್ಪ ಮತ್ತು ಆತನ ಹೆಂಡತಿ ಜಗಳ ಮಾಡುತ್ತಿದ್ದರು ಅಂದರೆ ಸರಿಯಲ್ಲಾ. ಆ ಕಾರಣಕ್ಕಾಗಿ ಕುಬೇರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದನು

ಅಂದರೆ ಸರಿಯಲ್ಲಾ. ಕುಬೇರಪ್ಪ ಸರಾಯಿ ಕುಡಿಯುತ್ತಿದ್ದ ಅಂದರೆ ಸರಿ. ಕುಬೇರಪ್ಪ ಸರಾಯಿ ಕುಡಿದು ಹೊಂಡದಲ್ಲಿ ಬಿದ್ದು ಮರಣ ಹೊಂದಿದ್ದಾನೆ ಅಂದರೆ ಸರಿಯಲ್ಲಾ. ನಾನು ಮತ್ತು ಚಾಸಾ-09 ರವರು ಕುಬೇರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ದುರುಪಯೋಗ ಪಡೆದುಕೊಂಡು ಚಾಸಾ-01 ರವರ ಕಡೆಯಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಕುಬೇರಪ್ಪನ ಮರಣಕ್ಕು ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲಾ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.